# ಗಣೇಶನ ಪ್ರತಿಮೆಯಿಂದ ವೃಕ್ಷ

ಇನ್ನೇನು ಗಣೇಶನ ಹಬ್ಬ ಸಮೀಪಿಸುತ್ತಿದೆ. ಮಕ್ಕಳಾದಿಯಾಗಿ ಎಲ್ಲರಿಗೂ ವಿಘ್ನ ವಿನಾಯಕನನ್ನು ಪ್ರತಿಷ್ಠಾಪಿಸುವ ಸಂಭ್ರಮ. ಗಣೇಶ ಮನೆಯಲ್ಲಿರುವಷ್ಟು ಹೊತ್ತು ಅದೆಂಥ ಸಡಗರ? ಹಬ್ಬದ ಭಾಗವಾಗಿ ಪ್ರೀತಿ–ಆದರದಿಂದ ಬರಮಾಡಿಕೊಂಡ ಗಣೇಶನನ್ನು ವಿಸರ್ಜಿಸುವುದೆಂದರೆ ಕೊಂಚ ಬೇಸರವೇ– ಅದರಲ್ಲೂ ಮಕ್ಕಳಿಗೆ.

ಒಂದೊಮ್ಮೆ ಹಬ್ಬಕ್ಕೆಂದು ಬಂದ ಗಣಪ ಮನೆಯಲ್ಲೆ ಉಳಿಯುವಂತಾದರೆ? ಬೆಳೆಯುವಂತಾದರೆ! ಗಣೇಶನ ಮೂರ್ತಿ ಕೆಳಗೆ ಬೀಜ ಬಿತ್ತಿ, ಪೂಜೆ ಮುಗಿದ ನಂತರ ಪ್ರತಿ ದಿನ ಆ ಗಣೇಶನಿಗೆ ನೀರೆರೆಯಿರಿ. ನೀರು ಹಾಕಿದಂತೆಲ್ಲ ಗಣೇಶನ ಪ್ರತಿಮೆ ಕರಗುತ್ತದೆ. ಏಳನೇ ದಿನ ಬಿತ್ತಿದ್ದ ಬೀಜ ಮೊಳಕೆ ಹೊಡೆಯುತ್ತದೆ. ಹೀಗೆ ದಿನ ಕಳೆದಂತೆ ಮೊಳಕೆ ಸಸಿಯಾಗುತ್ತದೆ. ನಂತರ ಮರವಾಗುತ್ತದೆ. ಸಂಭ್ರಮದಿಂದ ಪ್ರತಿಷ್ಠಾಪಿಸಿದ ಗಣೇಶ ನಮ್ಮ ಮನೆಯಲ್ಲಿ ಉಳಿಯುತ್ತಾನೆ, ಬೆಳೆಯುತ್ತಾನೆ.

ಹೌದು! ಹೀಗೊಂದು ಹೊಸ ಪರಿಕಲ್ಪನೆ ಹುಟ್ಟು ಹಾಕಿದವರು ಮುಂಬೈನ ದತ್ತಾತ್ರಿ ಕೊಟೂರ್. ಇದನ್ನು ಚಿತ್ರಿಸಿ, ಯು ಟ್ಯೂಬ್, ಫೇಸ್‌ಬುಕ್‌ಗಳಲ್ಲಿ ಹರಿಬಿಟ್ಟರು. ಈ ವರ್ಷ ಅವರ ನೂತನ ಪರಿಕಲ್ಪನೆಗೆ ಭಾರಿ ಬೆಂಬಲ ದೊರೆತಿದೆ. ಪ್ರಪಂಚದ ಮೊದಲ ಗಣೇಶನ ವಿಗ್ರಹ ಮರವಾಗಿ ರೂಪ ತಾಳುತ್ತದೆ. (The World's First Ganesha Idol That Grows Into A Tree) ಈ ಸಂದೇಶಕ್ಕೆ ಮೂರೇ ದಿನಗಳಲ್ಲಿ ಕರ್ನಾಟಕ, ಮುಂಬೈ, ಪುಣೆ, ಹೈದರಬಾದ್, ಉಗಾಂಡ, ಅಮೆರಿಕ ಸೇರಿದಂತೆ ಇತರ ದೇಶಗಳಿಂದ ಪ್ರತಿಕ್ರಿಯೆ ಬಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದೆ. ಅಂದ ಹಾಗೆ, ಹೆಚ್ಚು ಮೆಚ್ಚುಗೆ ವ್ಯಕ್ತಪಡಿಸಿದ್ದು ‘ಗಾರ್ಡನ್ ಸಿಟಿ’ ಬೆಂಗಳೂರಿನವರು. ಗಣೇಶನನ್ನು ಮನೆಯೊಳಗೆ ಪ್ರತಿಷ್ಠಾಪಿಸಿ ಎಲ್ಲೋ ವಿಸರ್ಜಿಸುವ, ಅದರಿಂದ ತೊಂದರೆ ಅನುಭವಿಸುವ ಬದಲು, ಮನೆಯ ಅಂಗಳದಲ್ಲಿ ಟ್ಟು ಹಬ್ಬದ ಸಮಯದಲ್ಲಿ ಬಿತ್ತ ಬೀಜ ಗಿಡವಾಗಿ, ಮರವಾಗುವುದನ್ನು ಕಂಡು ಸಂಭ್ರಮಿಸುವುದು ಒಳ್ಳೆಯದಲ್ಲವೆ? ಆ ಮೂಲಕ ನಮ್ಮ ಪ್ರಕೃತಿಗೊಂದಿಷ್ಟು ಕೊಡುಗೆಯನ್ನೂ ನೀಡಬಹುದು.

> ಹಬ್ಬಗಳನ್ನು ಒಂದಿಷ್ಟು ಪರಿಸರ ಸ್ನೇಹಿಯಾಗಿಸಿ, ಹಬ್ಬದ ಜತೆಗೆ ಮರಗಳನ್ನೂ ರಕ್ಷಿಸಿ.

ಹಬ್ಬಕ್ಕೆ ಇನ್ನೆರಡು ತಿಂಗಳಷ್ಟೆ. ‘ಪರಿಸರ ಸ್ನೇಹಿ ಗಣೇಶನ ಬಳಸಿ’ ಘೋಷಣೆಗಳು ಎಲ್ಲ ಮಾಧ್ಯಮಗಳಲ್ಲಿ ಮೊಳಗಲಿವೆ. ಆದರೆ, ಅಲ್ಲೊಂದು ಇಲ್ಲೊಂದು ಪರಿಸರ ಸ್ನೇಹಿ ನಡೆ ಬಿಟ್ಟರೆ, ಅದೇ ವರ್ಣರಂಜಿತ ಗಣೇಶ, ರಾಸಾಯನಿಕ ಬಣ್ಣಗಳಲ್ಲಿ ಮಿಂದೆದ್ದ ಗಣೇಶನನ್ನು ಕೆರೆ–ಕಟ್ಟೆ, ಹೊಳೆ, ಕಾಲುವೆಗಳಲ್ಲಿ ವಿಸರ್ಜಿಸುತ್ತೇವೆ. ನಮ್ಮ ಆಚರಣೆಗಳಿಂದು ಪರಿಸರ ಸ್ನೇಹಿಯಾಗಿ ಉಳಿದಿಲ್ಲ. ಹಬ್ಬಗಳ ಆಚರಣೆಯ ಆಶಯಗಳು, ಜೋರು ಸಂಭ್ರಮದ ನಡುವೆ ಮರೆಯಾಗಿವೆ. ಹೀಗಿರುವಾಗ ಗಣೇಶ ಹಬ್ಬವನ್ನೊಂದಿಷ್ಟು ಪರಿಸರ ಸ್ನೇಹಿಯಾಗಿಸುವ ನಿಟ್ಟಿನಲ್ಲಿ ನೀವೂ ಕೈಜೋಡಿಸಬಹುದು. www.treeganesha.com

■ ನಿಸರ್ಗ




ಚಿತ್ರ: ಎಸ್.ಕೆ ದಿನೇಶ್

